ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಸವಕಲ್ಯಾಣ

C. C. No.839/2022

CW.4-PW.3

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:- ದಿನಾಂಕ: 23.11.2024

| | |
|---|---|
| ಸಾಕ್ಷಿಯ ಹೆಸರು:- | ನಾಮದೇವ |
| ತಂದೆ ಹೆಸರು :- | ಬಾಬುರಾವ ಭೋಸಲೆ |
| ವಯಸ್ಸು :- | 30 ವರ್ಷ |
| ಉದ್ಯೋಗ :- | ಹೋಟೆಲ್ ವ್ಯಾಪಾರ |
| ವಾಸ ಸ್ಥಳ :- | ರಾಜೋಳಾ ಗ್ರಾಮ, ತಾ.ಬ.ಕಲ್ಯಾಣ. |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾಸಾ.1 ನನ್ನ ಸಹೋದರ ಇರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ ಇರುತ್ತಾರೆ. ಅವರು ನಮ್ಮೂರಿನವರಿರುತ್ತಾರೆ. ದಿನಾಂಕ 09.05.2022 ರಂದು ಸಂಜೆ 4.00 ಗಂಟೆ ಸುಮಾರಿಗೆ ನನ್ನ ತಮ್ಮ ಚಾಸಾ.1 ಇವರ ಅಂಗಡಿಯ ಹತ್ತಿರ ಆರೋಪಿ ನಂ.3 ರಿಂದ 6 ಇವರು ಬಂದು ಚಹಾ ಕುಡಿದು ಸಿಗರೇಟ್ ತಗೆದುಕೊಂಡಿರುತ್ತಾರೆ. ಆ ನಂತರ ಚಾಸಾ.1 ದುಡ್ಡು ಕೇಳಿದಾಗ, ಫೋನ್ ಪೇ ಮಾಡುತ್ತೇವೆಂದು ಹೇಳಿ, ಆತನೊಂದಿಗೆ ಜಗಳ ತೆಗೆದು, ಹೊಡೆ-ಬಡೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಮನೆಯಲ್ಲಿದ್ದು ನನಗೆ ವಿಷಯ ತಿಳಿಸಿರುತ್ತಾರೆ. ಆದ್ದರಿಂದ ತಕ್ಷಣ ನಾನು, ನನ್ನ ತಂದೆ ಚಾಸಾ.7, ನನ್ನ ಸಹೋದರ ಚಾಸಾ.5, ವೆಂಕಟ, ಚಾಸಾ.14 ಮತ್ತು ಚಾಸಾ.15 ಇವರೊಂದಿಗೆ ಅಂಗಡಿಯ ಹತ್ತಿರ ಹೋಗಿರುತ್ತೇವೆ. ಆಗ ಆರೋಪಿ ನಂ.3 ರಿಂದ 6 ಇವರು ನಮ್ಮ ತಮ್ಮನ ಜೊತೆ ಜಗಳ ಆಡುತ್ತಿದ್ದರು. ಆರೋಪಿ ನಂ.5 ಇವರು ಚಾಸಾ.1 ಇವರ ಬೆನ್ನಿನ ಮೇಲೆ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾನೆ. ಆರೋಪಿ ನಂ.6 ಇವರು ಚಾಸಾ.1 ಇವರಿಗೆ ಮುಖದ ಮೇಲೆ ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.5 ಇವರು ಚಾಸಾ.1 ಇವರಿಗೆ ಗುಪ್ತಾಂಗದ ಮೇಲೆ ಒದ್ದಿರುತ್ತಾರೆ. ಆರೋಪಿ ನಂ.4 ಇವರು ಚಾಸಾ.1 ಇವರ ಬೆನ್ನಿಗೆ ಮತ್ತು ಕಪಾಳಕ್ಕೆ ಹಲ್ಲೆ ಮಾಡಿರುತ್ತಾರೆ. ಆ ನಂತರ ಆರೋಪಿ ನಂ.3 ಇವರು ಚಾಸಾ.1 ಇವರ ಕೂದಲು ಹಿಡಿದು ಎಳೆದಾಡಿರುತ್ತಾನೆ. ಜಗಳ ಬಿಡಿಸಲು ಹೋದಾಗ ಆರೋಪಿ ನಂ.2 ಇವರು ಬಡಿಗೆಯಿಂದ ನನ್ನ ಬೆನ್ನಿಗೆ ಮತ್ತು ಕೈಗೆ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.14 ಇವರು ನನ್ನ ಮುಖದ ಮೇಲೆ ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿ ನಂ.4 ಇವರು ನನ್ನನ್ನು ಎತ್ತಿ ನೆಲಕ್ಕೆ ಹಾಕಿರುತ್ತಾರೆ. ಉಳಿದ ಎಲ್ಲಾ ಆರೋಪಿತರು ಸೇರಿ ನನಗೆ ಹಲ್ಲೆ ಮಾಡಿರುತ್ತಾರೆ. ಆ ನಂತರ ನನ್ನ ಜೊತೆ ಬಂದವರಿಗೆ ಎಲ್ಲರಿಗು ಆರೋಪಿತರು ಹಲ್ಲೆ ಮಾಡಿರುತ್ತಾರೆ. ಚಾಸಾ.2, 14, 15 ಇವರು ಜಗಳವನ್ನು ಬಿಡಿಸಿರುತ್ತಾರೆ. ಆ ನಂತರ ನಾವು ಠಾಣೆಗೆ ಬಂದಿರುತ್ತೇವೆ. ಘಟನೆ ಕುರಿತು ಚಾಸಾ.1 ಇವರು ದೂರನ್ನು ಸಲ್ಲಿಸಿರುತ್ತಾರೆ. ಆ ನಂತರ ಪೋಲಿಸರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಘಟನೆ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರು ಹಲ್ಲೆ ಮಾಡಲು ಬಳಸಿರುವ ಕಟ್ಟಿಗೆಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿ

ನ್ಯಾಯಾಲಯದ ಮುಂದಿರುವ ಮು-ಮಾ.1 ರಿಂದ 6 ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u>:ಆರೋಪಿತರ ಪರ: ಶ್ರೀ.ಎಸ್.ಪಿ.ಎಸ್. ವಕೀಲರಿಂದ.

ಹೋಟಲಿನಿಂದ ನಮ್ಮ ಮನೆ ಮೂರು ಮನೆ ಬಿಟ್ಟು ಇರುತ್ತದೆ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಬರಲು ಐದು ನಿಮಿಷ ಬೇಕಾಗುತ್ತದೆ. ಚಾಸಾ.1 ಇವರಿಗೆ ಹಲ್ಲೆ ಮಾಡುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಬರಲು 15 ರಿಂದ 20 ನಿಮಿಷ ಬೇಕಾಗುತ್ತದೆಂದರೆ ಸರಿಯಲ್ಲ. ಆರೋಪಿತರು ಹಲ್ಲೆ ಮಾಡಿದ ಕಾರಣ ನನಗೆ ಪ್ರಜ್ಞೆ ತಪ್ಪಿರುತ್ತದೆ. ಆರೋಪಿತರು ಮತ್ತು ಅನೀತಾ ಗಂಡ ಅಣ್ಣೆಪ್ಪ ಭೋಸಲೆ ಇವರ ನಡುವೆ ಪ್ಲಾಟ್ ವಿಷಯಕ್ಕೆ ಸಂಬಂಧಿಸಿದಂತೆ ಜಗಳಾಗಿದ್ದನ್ನು ನಮ್ಮ ಮೈಮೇಲೆ ಹಾಕಿಕೊಂಡಿರುತ್ತೇವೆಂದರೆ ಸರಿಯಲ್ಲ. ಪ್ಲಾಟಿಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ನನಗೆ ನೋಟೀಸ್ ಬಂದಿರುತ್ತದೆಂದರೆ, ಸಾಕ್ಷಿ ಈ ಪ್ರಕರಣದ ಜಗಳ ಆದ ನಂತರ ಬಂದಿರುತ್ತದೆಂದು ನುಡಿಯುತ್ತಾರೆ. ಪ್ಲಾಟಿಗೆ ಸಂಬಂಧಪಟ್ಟಂತೆ ಜಗಳವನ್ನು ಮುಂದೆ ಇಟ್ಟುಕೊಂಡು ಅನೀತಾ ಇವರಿಂದ ಹಣ ಪಡೆದು, ಆರೋಪಿತರ ವಿರುದ್ದ ಸುಳ್ಳು ದೂರು ಸಲ್ಲಿಸಿರುತ್ತದೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.